## ಬನವಾಸಿ ವೆಂಕಟೇಶ ದೀಕ್ಷಿತ್ ಅವರ

# ಹೊಸ ಧಾರಾವಾಹಿ




ವರ್ತಮಾನ, ಇತಿಹಾಸ, ಗ್ಲಾಮರ್, ಜನಪ್ರಿಯತೆ, ಉದ್ಯಮಿಗಳ ತಣ್ಣನೆ ಕ್ರೌರ್ಯ, ಮನುಷ್ಯನ ಮೂಲಭೂತ ಗುಣವಾದ ಸ್ವಾರ್ಥ - ಹೀಗೆ ಬಹು ಆಯಾಮಗಳ ರೋಚಕ ಕಥನ ಬನವಾಸಿ ವೆಂಕಟೇಶ ದೀಕ್ಷಿತ್‌ರ 'ನಕ್ಷತ್ರ ನುಂಗುವ ಸಮಯ'. ಇದು ಬಾನಂಗಳದ ತಾರೆಯ ಕಥೆಯಲ್ಲ. ಕಿರುತೆರೆಯ ಧಾರಾವಾಹಿಯ ಕಥನ. ಧಾರಾವಾಹಿಯೊಂದರ ಚಿತ್ರೀಕರಣದ ಜೊತೆಗೆ ಮನುಷ್ಯ ಸ್ವಭಾವಗಳ, ಹದಿಹರೆಯದ ತರುಣ-ತರುಣಿಯ ಸುಮಧುರ ಪ್ರೇಮ ಕಥಾನಕ. ಗ್ಲಾಮರ್ ಜಗತ್ತು ಎಂದ ಮೇಲೆ ಮೋಸ-ವಂಚನೆ ಇಲ್ಲದಿದ್ದೀತೆ? ವಾರ ವಾರದ ಈ ಸೀರಿಯಲ್‌ಗೆ ಮಲೆನಾಡಿನ ಪರಿಸರದ 'ಮಣ್ಣಿನ ಭವನ' ಎನ್ನುವ ಭವ್ಯಸೌಧವೇ ಕೇಂದ್ರ ಮತ್ತು ರಂಗಸ್ಥಳ. ಅಲ್ಲೇ ಇರುವವರ ಮತ್ತು ಆ ಮನೆಗೆ ಭೇಟಿ ಕೊಡುವವರ ಚಟುವಟಿಕೆಗಳು ರೋಚಕ, ಸಿನಿಮೀಯ ಹಾಗೂ ಅನಿರೀಕ್ಷಿತ ತಿರುವುಗಳಿಂದ ಕೂಡಿವೆ.

ಮುಂದಿನ ಸಂಚಿಕೆಯಿಂದ...

## ಬರಹಗಾರರ ಗಮನಕ್ಕೆ



- ಉತ್ತಮ ನುಡಿಚಿತ್ರ, ಕಥೆ, ಪ್ರವಾಸ ಕಥನಗಳಿಗೆ ಸ್ವಾಗತ. ನಿಮ್ಮ ಬರಹ ವರ್ತಮಾನದ ಜೀವನಶೈಲಿಯ ಚೆಲುವು, ವೈವಿಧ್ಯ ಹಾಗೂ ಸಂಕೀರ್ಣತೆಯನ್ನು ಹಿಡಿದಿಡುವಂತಿರಬೇಕು.
- ಬರಹದ ಜೊತೆ ಉತ್ತಮ ಗುಣಮಟ್ಟದ ಛಾಯಾಚಿತ್ರಗಳಿರಲಿ. ಅಂತರ್ಜಾಲದ ಚಿತ್ರಗಳನ್ನು ಕಳುಹಿಸುವುದು ಬೇಡ.
- ಪ್ರಕಟಿತ ಬರಹಗಳಿಗೆ ಸಂಭಾವನೆಯಿದೆ. ನಿಮ್ಮ ವಿಳಾಸ, ಬ್ಯಾಂಕ್ ಖಾತೆಯ ವಿವರಗಳುಳ್ಳ ಪಾಸ್‌ಬುಕ್‌ನ ಮೊದಲ ಪುಟ ಹಾಗೂ ಪ್ಯಾನ್ ಕಾರ್ಡ್‌ನ ಪ್ರತಿಗಳನ್ನು ಕಳುಹಿಸಿಕೊಡಿ.

ನಿಮ್ಮ ಬರಹ–ಚಿತ್ರಗಳನ್ನು ಇಲ್ಲಿಗೆ ಕಳುಹಿಸಿ:
editorsu@sudha.co.in

